# ಕ್ಲೈಮೇಟ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಮತ್ತು ಸಿಂಫೋನಿ ಲಿಮಿಟೆಡ್ ಕಂಪೆನಿ ಮಹತ್ವದ ಒಪ್ಪಂದಕ್ಕೆ ಸಹಿ


ಅಹ್ಮದಾಬಾದ್, ಜೂ. 27: ಆಸ್ಟ್ರೇಲಿಯಾ ಮೂಲದ ಕೂಲರ್ ಮತ್ತು ತಾಪನ ವಸ್ತುಗಳ ಉತ್ಪಾದಕ ಕಂಪೆನಿಗಳಲ್ಲಿ ಒಂದಾದ ಕ್ಲೈಮೇಟ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಕಂಪೆನಿಯ ಶೇ. 95ರಷ್ಟು ಈಕ್ವಿಟಿ ಷೇರುಗಳನ್ನು ಖರೀದಿಸಲು ಸಿಂಫೋನಿ ಲಿಮಿಟೆಡ್ ಕಂಪೆನಿಯು ಒಪ್ಪಂದ ಮಾಡಿಕೊಂಡಿದೆ.

ಈ ಕಂಪೆನಿಗಳ ನಡುವೆ ಸುಮಾರು 44 ಮಿಲಿಯನ್ ಆಸ್ಟ್ರೇಲಿಯನ್ ಡಾಲರ್‌ಗಳ ಒಪ್ಪಂದ ನಡೆಸಲಾಗಿದ್ದು, ಕ್ಲೈಮೇಟ್ ಟೆಕ್ನಾಲಜಿ ಕಂಪೆನಿಯು ಆಸ್ಟ್ರೇಲಿಯಾ, ಅಮೆರಿಕಗಳಂತಹ ರಾಷ್ಟ್ರದಲ್ಲಿ ಇಲೆಕ್ಟ್ರಾನಿಕ್ ವಸ್ತುಗಳ ಉತ್ಪಾದನೆ ಮತ್ತು ಮಾರಾಟವನ್ನು ಮಾಡುತ್ತಿದೆ. ಈ ಕಂಪೆನಿಯ ಮುಖ್ಯಾಲಯ ಉತ್ತರ ಆಸ್ಟ್ರೇಲಿಯಾದಲ್ಲಿದೆ.

1976ರಲ್ಲಿ ಟೆಡ್ ಸೆಲಿ ಅವರು ಈ ಕಂಪೆನಿಯನ್ನು ಸ್ಥಾಪನೆಮಾಡಿದ್ದು, ಶೇ. 90 ರಷ್ಟು ಷೇರುಗಳನ್ನು ಅವರು ತಮ್ಮ ಕುಟುಂಬಕ್ಕೆ ನೀಡಿದ್ದಾರೆ.

ಅದೇ ಈ ಕಂಪೆನಿಯ ಪ್ರಸಕ್ತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಟಿಮ್‌ಓ ಲೇರಿ ಅವರು ಶೇ. 10 ಷೇರನ್ನು ಹೊಂದಿದ್ದಾರೆ. ಉತ್ತಮ ಉತ್ಪಾದನೆ ಹೆಸರುವಾಸಿಯಾದ ಈ ಕಂಪೆನಿ ಕೂಲರ್ ಮತ್ತು ತಾಪನಗಳಂತ ಇಲೆಕ್ಟ್ರಾನಿಕ ವಸ್ತುಗಳನ್ನು ಸಿದ್ಧಪಡಿಸುತ್ತಾ ಬಂದಿದೆ.

ಸಿಂಫೋನಿ ಕಂಪೆನಿಯ ಸಿಎಂಡಿ ಮತ್ತು ಷೇರು ಪಾಲುದಾರ ಅಚಲ್ ಬಕೇರಿ ಅವರು ಮಾತನಾಡಿ, ಇಲೆಕ್ಟ್ರಾನಿಕ್ ಉತ್ಪಾದನೆಯಲ್ಲಿ ಪ್ರಮುಖ ಕಂಪೆನಿಗಳಲ್ಲಿ ಒಂದಾದ ಕ್ಲೈಮೇಟ್ ಕಂಪೆನಿಯ ಜತೆ ನಡೆಸಿದ ಒಪ್ಪಂದ ಮಹತ್ವಪೂರ್ಣವಾಗಿದೆ ಎಂದಿದ್ದಾರೆ.


ಅಚಲ್ ಬಕೇರಿ

**ಗ್ರಾಹಕರನ್ನು ಸೆಳೆಯಲು ಅನುಕೂಲ**

ಈ ಕಂಪೆನಿಯು ಆಸ್ಟ್ರೇಲಿಯ ಮತ್ತು ಅಮೆರಿಕದ ಮಾರುಕಟ್ಟೆಗಳಲ್ಲಿ ಉತ್ತಮ ಗುಣಮಟ್ಟದ ಉತ್ಪಾದನೆಯನ್ನು ಹೊಂದಿದೆ. ಭವಿಷ್ಯದಲ್ಲಿ ಈ ಒಪ್ಪಂದದಿಂದ ಎರಡು ರಾಷ್ಟ್ರಗಳಲ್ಲಿ ಗ್ರಾಹಕರನ್ನು ಸೆಳೆಯಲು ಸಂಸ್ಥೆಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.